


# ಆನೆಯ ಜಾಣತನ

ಆನೆಗಳ ಹಿಂಡೊಂದು ಪಟ್ಟಣಕ್ಕೆ ನುಗ್ಗಿತ್ತು. ಆ ಹಿಂಡಿನಲ್ಲಿ ಹಿರಿ ಆನೆ, ಕಿರಿ ಆನೆ, ಮರಿ ಆನೆ ಹೀಗೆ ಎಲ್ಲಾ ಆನೆಗಳಿದ್ದವು. ಆನೆಗಳ ಹಿಂಡು ಎಂದರೆ ಕೇಳಬೇಕೆ? ಎಲ್ಲಾ ಅಸ್ತವ್ಯಸ್ಥ. ಅಲ್ಲಲ್ಲಿ ಸಂಚಾರಕ್ಕೆ ತಡೆ. ಅಂಗಡಿಗೆ ನುಗ್ಗುವುದು. ಹಾಳು ಮಾಡುವುದು ನಡೆದೇ ಇತ್ತು. ಅವುಗಳನ್ನು ನೋಡುವುದೇ ಒಂದು ಖುಷಿ. ಆದರೆ ಅವುಗಳ ದಾಂದಲೆಯಿಂದ ನಷ್ಟ ಬೇರೆ. ಒಂಥರ ಆತಂಕ, ಜೀವಭಯ ಮೂಡಿಸಿದ್ದವು.

ಸರಿ, ಯಾರೋ ಅರಣ್ಯ ಇಲಾಖೆಗೆ ಫೋನಾಯಿಸಿದರು. ತಕ್ಷಣ ಅರಣ್ಯ ಇಲಾಖೆ ಸಿಬ್ಬಂದಿ ಬಂದರು. ತಮ್ಮ ಆನೆಗಳ ಮೂಲಕ ಕಾಡಾನೆಗಳನ್ನು ಖೆಡ್ಡಾಕ್ಕೆ ಬೀಳಿಸಿದರು. ಮಾವುತರು ಕೆಲವೇ ದಿನಗಳಲ್ಲಿ ಅವುಗಳನ್ನು ಪಳಗಿಸಿದರು. ಅವುಗಳಲ್ಲಿ ಒಂದು ಮರಿ ಹೆಣ್ಣಾನೆ ಇತ್ತು. ಅದು ಬಹಳ ಚೂಟಿಯಾಗಿತ್ತು. ಚೂತನ್‌ಖಾನ್ ಎಂಬ ಮಾವುತ ಅದನ್ನು ನೋಡಿಕೊಳ್ಳುತ್ತಿದ್ದ. ಅದಕ್ಕೆ ಟೆಡ್ಡಿ ಎಂದು ನಾಮಕರಣ ಮಾಡಿದ್ದ. ಅದು ಎಲ್ಲೇ ಇರಲಿ ಕರೆದಾಕ್ಷಣ ಓಡೋಡಿ ಬರುತ್ತಿತ್ತು. ಮಾವುತನು ಹೇಳಿ ಕೊಟ್ಟ ಎಲ್ಲಾ ಕೆಲಸಗಳನ್ನು ಮಾಡುತ್ತಿತ್ತು. ಆನೆಗಳ ತಂಡದಲ್ಲಿಯೇ ಈ ಆನೆ ಅಚ್ಚು ಮೆಚ್ಚಿನದಾಗಿತ್ತು. ಅರಣ್ಯ ಇಲಾಖೆಗೆ ಸೇರಿ ಸುಮಾರು ಹತ್ತು ವರ್ಷ ಕಳೆದಿತ್ತು. ಎಲ್ಲರೊಂದಿಗೆ ಅನುರಾಗದಿಂದ ಬೆಳೆದಿತ್ತು. ಬಹಳ ಹೊಂದಾಣಿಕೆಯಿಂದ, ಬುದ್ಧಿವಂತಿಕೆಯಿಂದ ವರ್ತಿಸುತ್ತಿತ್ತು.

ಒಂದು ದಿನ ಆನೆಯ ಜಲಕ್ರೀಡೆ ಮುಗಿದಿತ್ತು. ಅದರ ಮೈಮೇಲೆ ಕೆಲವು ಸ್ಲೋಗನ್ನುಗಳನ್ನು, ಚಿತ್ರಗಳನ್ನು ಬರೆದು, ಅದನ್ನು ಪೇಟೆಗೆ ಕರೆದುಕೊಂಡು ಮಾವುತ ಹೋಗಿದ್ದ. ಅಲ್ಲಿ ಎಲ್ಲರೂ ಈ ಆನೆಯನ್ನು ನೋಡುವವರೇ. ಚಿಕ್ಕ ಮಕ್ಕಳಿಗೆ ಖುಷಿಯೋ ಖುಷಿ. ಅದಕ್ಕೆ ಅಕ್ಕಿ, ಬೆಲ್ಲ, ತೆಂಗಿನಕಾಯಿ, ಬಾಳೆಹಣ್ಣು ಎಲ್ಲಾ ತಿನ್ನಲು ಕೊಡುತ್ತಿದ್ದರು. ಯಾರಾದರೂ ದಕ್ಷಿಣೆ ಕೊಟ್ಟರೆ ಅದನ್ನು ತನ್ನ ಸೊಂಡಿಲಿನಿಂದ ಸ್ವೀಕರಿಸಿ ತನ್ನ ಯಜಮಾನನಿಗೆ ನೀಡುತ್ತಿತ್ತು. ಹೀಗೆ ಮುಂದೆ ಮುಂದೆ ರಸ್ತೆಯಲ್ಲಿ ಸಾಗುತ್ತಿದ್ದ ಹಾಗೆ ಎಲ್ಲಿಂದಲೋ ಬಂದ ಸಾರಿಗೆ ಬಸ್ಸೊಂದು ಅದಕ್ಕೆ ಡಿಕ್ಕಿ ಹೊಡೆಯಿತು. ಅಲ್ಲಿದ್ದವರೆಲ್ಲಾ ಹೋ, ಹೋ ಎಂದು ಕೂಗಿದರು. ಅಷ್ಟರಲ್ಲಿಯೇ ಆನೆಗೆ ಬಲವಾಗಿ ಪೆಟ್ಟು ಬಿದ್ದಿತು. ಮಾವುತನು ಆನೆಯ ಮೇಲಿಂದ ಕೆಳಗೆ ಬಿದ್ದನು. ಅವನಿಗೂ ಪೆಟ್ಟಾಯಿತು. ಎಲ್ಲರೂ ಮರುಗುವವರೆ. ಬಸ್ಸಿನ ಚಾಲಕನಿಗೆ ಹಿಡಿ ಶಾಪ ಹಾಕಿದರು.

ಮೂಕ ಪ್ರಾಣಿಯ ವೇದನೆ ಹೇಳತೀರದು. ನಮ್ಮನ್ನು ಕಂಡರೆ ತಾತ್ಸಾರ. ನಮಗೆ ಏನಾಗಿದೆ? ಎಷ್ಟು ಪೆಟ್ಟು ಬಿದ್ದಿದೆ ಎಂದು ನೋಡಬೇಡವೇ? ಹೇಳದೆ ಕೇಳದೆ ವಾಹನ ಓಡಿಸಿಕೊಂಡು ಹೋದ ಚಾಲಕನ ಮೇಲೆ ಆನೆಯು ಸಿಟ್ಟಾಯಿತು. ನಮ್ಮನ್ನು ಕಂಡರೆ ಅಷ್ಟೊಂದು ಅಸಡ್ಡೆ. ನಮ್ಮ ಬಗ್ಗೆ ಕಾಳಜಿಯೆ ಇಲ್ಲ ಈ ಜನರಿಗೆ ಎಂದು ಅದರ ಕಣ್ಣು ತೇವವಾದವು. ಆ ನೋವಿನಲ್ಲಿಯೇ ಮಾವುತನನ್ನು ಸೊಂಡಿಲಲ್ಲಿ ಎತ್ತಿಕೊಂಡು ಆಸ್ಪತ್ರೆ ಕಡೆ ಹೊರಟಿತು. ತಲೆಗೆ ಬಿಳಿ ಸ್ಕಾರ್ಫ್ ಕಟ್ಟಿದ, ಬಿಳಿ ಡ್ರೆಸ್, ಸ್ಕರ್ಟ್ ಧರಿಸಿದವರು ಎಲ್ಲಿರುತ್ತಾರೋ ಅದೇ